# ಗುರುವಿನೊಡನೆ ದೇವರಡಿಗೆ

**ಆಧ್ಯಾತ್ಮಿಕ ಸಂಭಾಷಣೆ** **ಸ್ವಾಮಿ ಭೂತೇಶಾನಂದ**



**(ವರ್ತಮಾನ ಕಾಲದಲ್ಲಿ ಆಧುನಿಕ ವಿಜ್ಞಾನದ ದೆಸೆಯಿಂದ ಮತ್ತು ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಪ್ರಚಾರದ ಸಹಾಯದಿಂದ ಶ್ರೀರಾಮಕೃಷ್ಣರ ಉಪದೇಶ, ಜೀವನಗಳ ವಿಚಾರ ಜಗತ್ತಿನಾದ್ಯಂತ ಹರಡಿದೆ. ಆದರೆ ಉಳಿದ ಅವತಾರಗಳ ವಿಚಾರದಲ್ಲಿ ಹಾಗೆ ಆಗಿಲ್ಲ. ಹಾಗಾದರೆ ಆಯಾ ಅವತಾರಪುರುಷರು ಇತರ ಜನಾಂಗ ಮತ್ತು ದೇಶದವರಿಗೂ ಸೇರಿದ್ದಾರೆಂದು ಸಾಧಿಸಿ ತೋರಿಸಬೇಕೆ? ಎಂಬ ಪ್ರಶ್ನೆಗೆ ಸ್ವಾಮೀಜಿ ಉತ್ತರಿಸುತ್ತಿದ್ದಾರೆ. ಪ್ರಶ್ನೆಗೆ ಅವರು ನೀಡಿದ ಉತ್ತರದ ಮುಂದಿನ ಭಾಗ ಇದು.)**

**ಸ್ವಾಮೀಜಿ :** ಇನ್ನೊಂದು ಘಟನೆ. ನಮ್ಮ ಸಂಘದ ಹಿರಿಯ ಸಾಧುಗಳೊಬ್ಬರು ಹಿಮಾಲಯದ ಕೇದಾರ ಮೊದಲಾದ ಕಡೆ ತೀರ್ಥಯಾತ್ರೆ ಹೋಗಿದ್ದರು. ರಸ್ತೆಬದಿಯಲ್ಲಿ ಒಂದು ಕಡೆ ಸ್ನಾನ ಮಾಡಲು ನದಿಗೆ ಇಳಿದರು. ಅವರ ಕತ್ತಿನಲ್ಲಿ ಶ್ರೀಮಾತೆಯವರ ಚಿತ್ರವಿರುವ ಒಂದು ಲಾಕೆಟ್ ಇತ್ತು. ಸ್ನಾನಕ್ಕೆ ಮೊದಲು ಅವರು ಅದನ್ನು ತೆಗೆದು ದಡದ ಮೇಲಿಟ್ಟಿದ್ದರು. ಒಬ್ಬರು ಈ ಲಾಕೆಟ್ಟನ್ನು ನೋಡಿ, "ಯಾರು ಈ ಮಹಿಳೆ?" ಎಂದು ಕೇಳಿದರು. ಅದಕ್ಕೆ ನಮ್ಮ ಸಾಧು ಹೇಳಿದರು, "ಅವರು ಶ್ರೀರಾಮಕೃಷ್ಣ ಪರಮಹಂಸರ ಧರ್ಮಪತ್ನಿ." ದಡದಲ್ಲಿದ್ದವರೊಬ್ಬರು ಇದನ್ನು ಕೇಳಿಸಿಕೊಂಡು, ಸ್ವಲ್ಪ ಮುನಿಸಿನಿಂದಲೇ ಹೇಳಿದರಂತೆ, "ಏನು, ಅವರನ್ನು 'ಶ್ರೀಮಾತೆ' ಎಂದು ಕರೆಯುವುದಿಲ್ಲವೇನು?" ಎಂದು.

ವಿದೇಶದಲ್ಲಿ ಬಹಳಷ್ಟು ಜನ ಶ್ರೀರಾಮಕೃಷ್ಣರನ್ನು ಅರ್ಥಮಾಡಿಕೊಳ್ಳದೆ, ಸ್ವಾಮಿ ವಿವೇಕಾನಂದರೇ ಭಗವದವತಾರವೆಂದು ತಿಳಿದಿದ್ದಾರೆ. ನಮ್ಮಲ್ಲಿ ಆಸ್ಟ್ರೇಲಿಯಾದ ಒಬ್ಬ ಬ್ರಹ್ಮಚಾರಿಯಿದ್ದನು. ಅವನ ಹೆಸರು ವೇಲ್ ಎಂದು. ಆ ಬ್ರಹ್ಮಚಾರಿ ಒಮ್ಮೆ ನನಗೆ ಹೇಳಿದನು, "ಸ್ವಾಮೀಜಿಯವರು (ವಿವೇಕಾನಂದರು) ನನ್ನನ್ನು ರಸ್ತೆಧೂಳಿನಿಂದ ಹೆಕ್ಕಿ ಇಲ್ಲಿಗೆ ತಂದಿದ್ದಾರೆ" ಎಂದು.

ಅದೊಂದು ಅಲೌಕಿಕ ವಿಚಾರ. ಆ ದಿನ ಆತನ ಜನ್ಮದಿನವಿತ್ತು. ಜನ್ಮದಿನದ ಆಚರಣೆಗಾಗಿ, ಮದ್ಯವನ್ನು ತರಲು ಮಾರುಕಟ್ಟೆಗೆ ಅವನು ಹೋಗಿದ್ದ. ಅಲ್ಲಿನವರಿಗೆ ಜನ್ಮದಿನದ ಆಚರಣೆಯಲ್ಲಿ ಮದ್ಯ ಬಹು ಮುಖ್ಯ ವಸ್ತು. ತನ್ನ ಸ್ನೇಹಿತರನ್ನೆಲ್ಲ ಅವನು ಕಾರ್ಯಕ್ರಮಕ್ಕೆ ಆಮಂತ್ರಿಸಿದ್ದ. ಮದ್ಯದ ಸೀಸೆಗಳನ್ನು ಹಿಡಿದುಕೊಂಡು ಅವನು ರಸ್ತೆಯಲ್ಲಿ ನಡೆದುಕೊಂಡು ಬರುತ್ತಿದ್ದ. ಈ ಸಂದರ್ಭದಲ್ಲಿ ರಸ್ತೆಯ ಮಧ್ಯೆ ಅವನಿಗೊಂದು ಅಪರೂಪದ ಅನುಭವ ಆಯಿತು. ಅವನು ಒಬ್ಬ ಮಹಾತ್ಮರನ್ನು ನೋಡಿದ! "ಯಾರು ಇವರು? ನಾನು ನೋಡಿದ್ದು ಯಾರನ್ನು? ಹೆಸರಂತೂ ಗೊತ್ತಿಲ್ಲ. ಬಹುಶಃ ಇವರು ಒಬ್ಬ ಮಹಾತ್ಮರಿರಬಹುದು ಎಂದು ಅನ್ನಿಸುತ್ತಿದೆ. ಈ ಮಹಾತ್ಮರು ತಾವಾಗಿಯೇ ದರ್ಶನ ಕೊಟ್ಟಿದ್ದು, ನನ್ನ ಜೀವನದಲ್ಲಿ ಪರಿವರ್ತನೆ ತರಲೆಂದೇ ಇರಬೇಕು." ಹೀಗೆ ವಿಚಾರ ಮಾಡುತ್ತಾ ಮದ್ಯದ ಬಾಟಲಿಗಳನ್ನು ರಸ್ತೆಯಲ್ಲಿಯೇ ಒಡೆದುಹಾಕಿದ. ಮನೆಗೆ ಬರಿ ಕೈಯಲ್ಲಿ ಅವನು ಬಂದದ್ದನ್ನು ನೋಡಿ ಅವನ ತಂಗಿ, "ಮದ್ಯ ಎಲ್ಲಿ?" ಎಂದು ಕೇಳಿದಳು. "ಇವತ್ತಿನಿಂದ ನಾನು ಮದ್ಯ ಮುಟ್ಟುವುದಿಲ್ಲ" ಎಂದ ಇವನು. ಯಾರ ದರ್ಶನವನ್ನು ಪಡೆದಿದ್ದನೋ ಆ ಮಹಾಪುರುಷನನ್ನು ಅಂದಿನಿಂದ ಹುಡುಕಲು ಆರಂಭಿಸಿದ. ಎಲ್ಲಾ ಕಡೆ ಹುಡುಕಿದ, ಆತನಿಗೆ ಯಾವ ಸುಳಿವೂ ದೊರೆಯಲಿಲ್ಲ. ಅವನಿದ್ದ ಊರಿನಿಂದ ಸಿಡ್ನಿ ನಗರ ಇನ್ನೂರು ಮೈಲಿ ದೂರ ಇತ್ತು. ಸಿಡ್ನಿಯಲ್ಲಿ ಯಾರಾದರೂ ಸುಳಿವು ಕೊಟ್ಟಾರೆಂದು ಅಲ್ಲಿಗೆ ಪ್ರಯಾಣ ಬೆಳೆಸಿದ.

ಸಿಡ್ನಿಯಲ್ಲಿ ಸುತ್ತಾಡುತ್ತ ಒಂದು ಪುಸ್ತಕದಂಗಡಿಯ ಎದುರು ಮಾತಿಲ್ಲದೆ ಆಶ್ಚರ್ಯಚಕಿತನಾಗಿ ನಿಂತುಬಿಟ್ಟ. ನೋಡುತ್ತಾನೆ, ಒಂದು ಪುಸ್ತಕದ ಮುಖಪುಟದ ಮೇಲೆ ಸ್ವಾಮಿ ವಿವೇಕಾನಂದರ ಧ್ಯಾನಸ್ಥ ಭಾವಚಿತ್ರ ಕಂಡುಬರುತ್ತಿದೆ! ಆ ಪುಸ್ತಕದ ಹೆಸರು, 'ರಾಜಯೋಗ'. ಸ್ವಾಮೀಜಿಯ ಭಾವಚಿತ್ರವನ್ನು ನೋಡಿದ ಮೇಲೆ ಅವನಿಗೆ, "ಇವರೇ, ಈ ಮಹಾತ್ಮರೇ ನನಗೆ ದರ್ಶನ ಕೊಟ್ಟಿದ್ದು" ಎನ್ನುವುದು ಖಚಿತವಾಯಿತು. ಅಲ್ಲಿಂದ ಆ ಪುಸ್ತಕವನ್ನು ಕೊಂಡುತಂದು ಓದಿದ. ಅದರಲ್ಲಿ ಅದ್ವೈತ ಆಶ್ರಮದ ವಿಳಾಸ ಇತ್ತು. ಅಲ್ಲಿಗೆ ಒಂದು ಪತ್ರ ಬರೆದ. ಆಗ ಅಲ್ಲಿ ಸ್ವಾಮಿ ಅಶೋಕಾನಂದರು ಇದ್ದರು. ಅವರು ಅವನ ಪ್ರಶ್ನೆಗಳಿಗೆ ಪತ್ರಮುಖೇನ ಉತ್ತರ ನೀಡಲು ಆರಂಭಿಸಿದರು. ಅನಂತರ ಮಹಾಪುರುಷ್ ಮಹಾರಾಜರ (ಸ್ವಾಮಿ ಶಿವಾನಂದರ) ಹತ್ತಿರ ಸಂಪರ್ಕವೇರ್ಪಡಿಸಿ, ತನ್ನ ಆಧ್ಯಾತ್ಮಿಕ ಜಿಜ್ಞಾಸೆಗಳಿಗೆ ಅವರನ್ನು ಕೇಳಿಕೊಳ್ಳುವಂತೆ ಅವನಿಗೆ ತಿಳಿಸಿದರು. ಅಂದಿನಿಂದ ಈ ಬ್ರಹ್ಮಚಾರಿಯು ಮಹಾಪುರುಷ್ ಮಹಾರಾಜರೊಂದಿಗೆ ಪತ್ರವ್ಯವಹಾರ ನಡೆಸುತ್ತ, ಕೊನೆಗೆ ತಾನು ಸಂನ್ಯಾಸಿ ಆಗುವ

ಇಚ್ಛೆಯನ್ನು ವ್ಯಕ್ತಪಡಿಸಿದ. ಮಹಾಪುರುಷ್ ಮಹಾರಾಜರು ಹೇಳಿದರು, "ನಿಮ್ಮ ದೇಶದಿಂದ ಈ ದೇಶಕ್ಕೆ ಬಂದರೆ ನಿನ್ನ ಆರೋಗ್ಯ ಕೆಟ್ಟುಹೋಗುತ್ತದೆ. ಹಾಗಾಗಿ ಬರಲೇಬೇಡ" ಎಂದು. ಆದರೆ ಆತ ಬಿಡಬೇಕಲ್ಲ! ಪುನಃ ಮಹಾಪುರುಷ್ ಮಹಾರಾಜರು ಉತ್ತರ ಕೊಟ್ಟರು, "ಸರಿ ಹಾಗಾದರೆ ಬಾ, ಆದರೆ ನೀನು ಹಿಂದಿರುಗಲು ಬೇಕಾದಷ್ಟು ಹಣ ತಂದು ನಮ್ಮ ಹತ್ತಿರ ಜಮಾ ಮಾಡು. ನಾವೆಲ್ಲಿಂದ ನಿನಗೆ ಹಣ ಕೊಡುವುದು! ನಿನ್ನ ಆರೋಗ್ಯ ಕೆಟ್ಟುಹೋದರೆ ನಿನ್ನನ್ನು ಏನು ತಾನೇ ಮಾಡುವುದು?" ಹಾಗೆಯೇ ಆಯಿತು ನೋಡಿ! ಕೆಲವು ವರ್ಷಗಳಲ್ಲಿ ಆತನ ಆರೋಗ್ಯ ಬಹಳ ಕೆಟ್ಟುಹೋಯಿತು. ಆಗ ಆತ ಹಿಂದಿರುಗಿ ಹೋಗಲೇಬೇಕಾಯಿತು. ಸ್ವಂತ ಹಣ ಇದ್ದುದರಿಂದ ಆತ ಹಿಂದಿರುಗಿಹೋದ. ಆಮೇಲೆಯೂ ಜೀವನಪರ್ಯಂತ ಸ್ವಾಮೀಜಿಯ ಭಕ್ತನಾಗಿಯೇ ಉಳಿದ.

ಒಂದು ಸಲ ಆತನನ್ನು ನಾನು ಮಾಸ್ಟರ್ ಮಹಾಶಯರ (ಮಹೇಂದ್ರನಾಥ ಗುಪ್ತ) ಹತ್ತಿರ ಕರೆದುಕೊಂಡು ಹೋಗಿದ್ದೆ. ಸಂದರ್ಭಾನುಸಾರ ಮಾತಾಡುತ್ತ, ಶ್ರೀರಾಮಕೃಷ್ಣ ಪರಮಹಂಸರು ಅವತಾರಪುರುಷರೆಂದು ಮಾಸ್ಟರ್ ಮಹಾಶಯರು ಹೇಳಿದರು. ಆ ಬ್ರಹ್ಮಚಾರಿ ಪರಮಹಂಸರ ಭಕ್ತನಲ್ಲ. ಆತ ಹೇಳಿದ, ಸ್ವಾಮೀಜಿಯವರು ಅವತಾರಪುರುಷರೆಂದು. "ಸ್ವಾಮೀಜಿ ಅಲ್ಲ, ಶ್ರೀರಾಮಕೃಷ್ಣರು" ಎಂದು ಮಾಸ್ಟರ್ ಮಹಾಶಯರು ಬಿಡಿಸಿ ಹೇಳಿದರೂ ಆತ ಅದಕ್ಕೆ ಒಪ್ಪಲೇ ಇಲ್ಲ. ಒಂದು ಕಡೆ ಸ್ವಾಮೀಜಿ ಶ್ರೀರಾಮಕೃಷ್ಣರನ್ನುದ್ದೇಶಿಸಿ, "ಅವರು ಭಗವಂತನ ತಂದೆ" ಎಂದು ಹೇಳುತ್ತಾರೆ. ಭಗವಾನ್ ಎಂದರೆ ಅವತಾರ, 'ಭಗವಂತನ ತಂದೆ' ಎಂದರೆ ಅವರಿಗಿಂತ ಇನ್ನೂ ಶ್ರೇಷ್ಠರಾದವರು ಎಂದು. ಅಂದರೆ 'ಅವತಾರವರಿಷ್ಠ' ಎಂದರ್ಥ.

ಅವತಾರಪುರುಷರ ವೈಶಿಷ್ಟ್ಯವೆಂದರೆ ಅವರ ಒಳಗೆ 'ಮನುಷ್ಯಭಾವ' ಮತ್ತು 'ದೇವತಾಭಾವ' – ಎರಡೂ ಒಟ್ಟೊಟ್ಟಿಗೇ ಇರುತ್ತವೆ. ಸ್ವತಃ ಶ್ರೀರಾಮಕೃಷ್ಣರೇ ಹೇಳುತ್ತಿದ್ದರು, "ಇದರೊಳಗೆ (ತಮ್ಮ ದೇಹ) 'ಭಕ್ತ' ಮತ್ತು 'ಭಗವಾನ್' – ಈ ಎರಡೂ ಭಾವಗಳಿವೆ". ಈ ಎರಡೂ ಭಾವಗಳು ಜೊತೆಜೊತೆಗಿದ್ದರೂ ಸಾಮಾನ್ಯರಾದ ನಮಗೆ ಅದನ್ನು ಅರ್ಥ ಮಾಡಿಕೊಳ್ಳುವುದು ಕಷ್ಟ. ಹಾಗೆಂದು ಇವುಗಳಲ್ಲಿ ಒಂದರ ಜೊತೆ ಇನ್ನೊಂದನ್ನು ಬೆರೆಸಬಾರದು. ಆದರೂ ಅವು ಒಂದರ ಜೊತೆ ಇನ್ನೊಂದು ಒಟ್ಟೊಟ್ಟಿಗೇ ಇರುತ್ತವೆ. ಅವತಾರಪುರುಷರು ತಾವು ಇಚ್ಛೆಪಟ್ಟರೆ ಎರಡು ಅವಸ್ಥೆಗಳಲ್ಲಿ ಯಾವುದಾದರೂ ಒಂದರಲ್ಲಿ ಇರಬಲ್ಲರು. ಎರಡೂ ಭಾವಗಳು ಬೇರೆ ಬೇರೆ. ಒಂದು ಪೂರ್ಣ (ದೇವತಾಭಾವ), ಇನ್ನೊಂದು ಅಪೂರ್ಣ(ಮಾನುಷಭಾವ). ಆದರೂ ಒಂದೇ ವ್ಯಕ್ತಿಯಲ್ಲಿ ಒಂದೇ ಸ್ಥಾನವನ್ನು ಅವರೆಡೂ ಆವರಿಸಿಕೊಂಡಿರಬಲ್ಲವು. ಅಂತಹವರನ್ನೇ ನಾವು 'ಅವತಾರಪುರುಷರು' ಎಂದು ಕರೆಯುವುದು. ಅವತಾರಪುರುಷರ ಆಂತರ್ಯದಲ್ಲಿ ಮನುಷ್ಯಭಾವ ಇರದಿದ್ದರೆ, ಅವರ 'ಅವತಾರತ್ವ'ವು ಪ್ರಯೋಜನಕ್ಕೆ ಬರುವುದಿಲ್ಲ. ಮನುಷ್ಯರ ಜೊತೆ ಮನುಷ್ಯರ ಹಾಗೇ ವ್ಯವಹರಿಸಬೇಕಾಗುತ್ತದೆ. ಹೀಗೆ ಇರದಿದ್ದರೆ ಜನಸಾಮಾನ್ಯರನ್ನು ಆಕರ್ಷಿಸಲು ಸಾಧ್ಯವೇ? ಹಾಗೆಂದು ಬರೀ ಮನುಷ್ಯಭಾವದಲ್ಲಿ ಮಾತ್ರ ಅವರು ಇರುವುದಿಲ್ಲ. ಇಚ್ಛೆಪಟ್ಟರೆ ಮನುಷ್ಯಭಾವದಿಂದ ದೇವತಾಭಾವದ ಸ್ಥಿತಿಗೆ ಅವರು ಏರಬಲ್ಲರು ಮತ್ತು ಇತರರಿಗೂ ಆ ಅನುಭವವನ್ನು (ಭಾವಾವಸ್ಥೆ) ನೀಡಬಲ್ಲರು.




## ವಿಚಾರ–ಮಂಜರಿ

**ಲೇಖಕರು:** ದ.ರಾ. ಬೇಂದ್ರೆ; ಮಿಂಚಿನಬಳ್ಳಿ ಪ್ರಕಾಶನ, ಧಾರವಾಡ ; **ಪ್ರಕಟನೆಯ ವರ್ಷ:** ಫೆಬ್ರವರಿ ೧೯೪೫


ಶ್ರೀರಾಮಕೃಷ್ಣ ಮಿಶನ್ನಿನ ಕಾರ್ಯವು ಭೂಪಟದಂತೆ ಭೂಮಿಯನ್ನು ಸುತ್ತಿ ಹಬ್ಬಿದೆ. ಶ್ರೀರಾಮಕೃಷ್ಣ ಮನ್ವಂತರವು ಮಾನವಧರ್ಮವನ್ನು ಸಾರಬಂದಿದೆ. ಶ್ರೀರಾಮಕೃಷ್ಣರು ಅದರ ಮನವು.... ಎಲ್ಲ ಮತಪಂಥಗಳ ಧರ್ಮ ಸ್ವರೂಪವನ್ನು ಪ್ರಕಾಶಗೊಳಿಸಲು ಶ್ರೀರಾಮಕೃಷ್ಣರ ಅವತಾರವಾಯಿತು. ಆ ಧರ್ಮವು ಮಾನವನು ದೇವನಾಗುವ ಧರ್ಮ. ಧರ್ಮವು ಅನುಭಾವದ ಮಾತು....ಶ್ರೀರಾಮಕೃಷ್ಣರಿಂದ ಪ್ರಾರಂಭವಾದ ಈ ಗುರು ಮಾಲೆಯು ಭೂಮಿಯನ್ನು ಒಂದು ಅಪ್ಪುಗೆಯಲ್ಲಿ ಹಿಡಿದು ಮಾನವರನ್ನು ಒಂದು ಜಾತಿಗೆ ತರಲು ತವಕಪಡುತ್ತಿದೆ.

ಶ್ರೀರಾಮಕೃಷ್ಣ ವಿವೇಕಾನಂದರು ನರ–ನಾರಾಯಣ ಪರಂಪರೆಯ ಋಷಿಗಳು. 'ಪ್ರಾಣಕ್ಕೆ ಒದ್ದಾಡಿ ಪಶುಗಳಾಗಬೇಡಿ; ಜೀವನದ ಕರೆಗೆ ಓಗೊಟ್ಟು ದೇವರಾಗಿರಿ' ಎಂದು ಅವರು ತಮ್ಮ ವಿದ್ಯುತ್ ಸಂದೇಶವನ್ನು ಕಳಿಸಿದಂದಿನಿಂದ ಆಕಾಶವಾಣಿಯಂತೆ ಅದು ಎಲ್ಲ ವಿದ್ಯುತ್ ದೇಹಗೇಹಗಳಲ್ಲಿ ತನ್ನ ಮೇಘ ಗರ್ಜನೆಯನ್ನು ಮಾಡುತ್ತಿದೆ. ಪಶುವು ಒಗರು–ಕಾಯಿ; ಮಾನವನು ಹುಳಿ–ಕಾಯಿ, ದೇವನು ಹಣ್ಣು, ಈ ಪಕ್ವತೆಯ ಪರಿಣಾಮಕ್ಕೆ ಭಾರತದ ಧೀರ ವಾಣಿಯು ಭೂಮಂಡಲದ ಮಾನವನ ಕೋಟೆಯನ್ನು ಕರೆಯುತ್ತಿದೆ... 'ವಿಭಕ್ತವಿದ್ದಲ್ಲಿಯೂ ಅವಿಭಕ್ತವನ್ನು ಕಾಣುವುದು ಸಾತ್ವಿಕ ಬುದ್ಧಿಯ ಲಕ್ಷಣ.' ಈ ಸತ್ತ್ವದ ಸಾತ್ವಿಕತೆಯನ್ನು ಸ್ಥಾಯಿಯಾಗಿ ನಿಲ್ಲಿಸಲು ಶ್ರೀರಾಮಕೃಷ್ಣರೇ ಮೊದಲಾದ ಮಹಾತ್ಮರಂಥ ಮಹಾಸತ್ವಗಳು ಕ್ಷಣಕಣಕ್ಕೂ ಅಭ್ಯಾಸ ಮಾಡಿಸುವವು... ವಿಶ್ವಕುಟುಂಬ, ಸಹಧರ್ಮ, ದೇವಲೋಕಗಳನ್ನು ರಚಿಸಬಂದ ಶ್ರೀರಾಮಕೃಷ್ಣರಂಥ ಆತ್ಮಶಿಲ್ಪಿಗಳು ಅಪರೂಪ. ಸ್ಪರ್ಶಮಣಿಯ ಸಾಮರ್ಥ್ಯವು ಅವರಿಗಿರುತ್ತದೆ. ಅಂಥವರ ಜೀವನದ ಶ್ರವಣ, ಮನನ, ನಿದಿಧ್ಯಾಸವು ತಾರಕ ಮಂತ್ರವಾಗುವುದು. ಶ್ರೀರಾಮಕೃಷ್ಣ ರಸಾಯನವು ನರಲೋಕದ ವಿವೇಕವನ್ನೇ ಬೆಳಗಿ ಆನಂದ ಸಾಮ್ರಾಜ್ಯದ ಜಯಭೇರಿಯನ್ನು ಮೊಳಗಿಸಲಿ. ಓಂ ಶಾಂತಿಃ, ಶಾಂತಿಃ, ಶಾಂತಿಃ. (ಪುಟ ೮೧ –೮೪)

# ಪುಷ್ಪ ೯ –ಸ್ವಾಮಿ ತುರೀಯಾನಂದ

ಶ್ರೀರಾಮಕೃಷ್ಣ ಶಿಷ್ಯೋದ್ಯಾನ

ಡಾ. ಕೆ. ಅನಂತರಾಮು



**ಸ್ವಾ**ಮಿ ತುರೀಯಾನಂದರು ಪರಮಹಂಸರ ಹೂದೋಟದಲ್ಲಿ ಅರಳಿದ ಸಂಪಿಗೆ ಹೂವಿನ ಹಾಗೆ. ದೂರದೂರದವರೆಗೂ ತನ್ನ ಸುವಾಸನೆಯನ್ನು ಹಬ್ಬಿಸುವ ಗುಣ ಅದರದು. ಅಂತೆಯೇ ತುರೀಯಾನಂದರು ಭರತಭೂಮಿಯಲ್ಲಿ ಮಾತ್ರವಲ್ಲದೆ, ಅಮೇರಿಕೆಯನ್ನು ಹೊಕ್ಕು, ಅಲ್ಲಿಯೂ ವೇದಾಂತದ ಪರಿಶುದ್ಧವಾದ ಪರಿಮಳವನ್ನು ಪಸರಿಸಿ ಬಂದ ಮಹಾಪುರುಷರು. ತಮ್ಮ ನಿರ್ಭಯತೆಯಿಂದ, ರಾಮಬಾಣದಂತೆ ಗುರಿಯಿಟ್ಟು ನಾಟಿಸುವ ವಚನವಿಲಾಸದಿಂದ, ಕೆಲಸಕಾರ್ಯಗಳಲ್ಲಿ ತೋರಿಸುವ ಕೌಶಲ್ಯವೇ ಯೋಗವೆಂದು ಆಚರಿಸಿದ್ದರಿಂದ, ಅಗಾಧ ಅಧ್ಯಯನಶೀಲತೆಯಿಂದ ರಾಮಕೃಷ್ಣಪಂಥದ ಯತಿಪರಂಪರೆಯಲ್ಲಿ ಅನನ್ಯವಾದ ಸ್ಥಾನಕ್ಕೆ ಪಾತ್ರ ರಾಗಿದ್ದಾರೆ. "ತುರೀಯಾನಂದರ ಅನುಪಮವಾದ ವೈರಾಗ್ಯ, ಸ್ಥಿರವಾದ ಮನಸ್ಸು, ಕಷ್ಟಸಹಿಷ್ಣುತೆ ಮುಂತಾದ ವಿಶೇಷ ಗುಣಗಳನ್ನು ನೆನೆದಾಗ ನನ್ನಲ್ಲಿ ನೂತನಶಕ್ತಿಯ ಸಂಚಾರವಾಗುತ್ತದೆ" ಎಂದು ಸ್ವಾಮಿ ವಿವೇಕಾನಂದರಿಂದ ಹೊಗಳಿಸಿಕೊಂಡ ಅವರ ಬದುಕೇ ಒಂದು ವಿಸ್ಮಯ!

**ಇಡೀ ಜಗತ್ತೇ ಅವನದಾಗುತ್ತದೆ:** ಪಶ್ಚಿಮಬಂಗಾಳದ ರಾಜಧಾನಿಯಾದ ಕೊಲ್ಕತ್ತಾ ಮಹಾನಗರದ ಚಂದ್ರನಾಥ ಚಟ್ಟೋಪಾಧ್ಯಾಯ–ಪ್ರಸನ್ನಮಯಿ ದಂಪತಿಗಳಿಗೆ ಸರಿಸಮನಾಗಿ ಮೂರು ಹೆಣ್ಣುಮಕ್ಕಳೂ ಮೂರು ಗಂಡುಮಕ್ಕಳೂ ಇದ್ದರು. ಅವರ ಪೈಕಿ ಎಲ್ಲರಿಗಿಂತ ಕಿರಿಯರಾಗಿ, ಎಲ್ಲರಿಗಿಂತ ಹಿರಿಯ ಸಾಧನೆ ಮಾಡಿದವರೇ ನಮ್ಮ ಕಥಾನಾಯಕ ಹರಿನಾಥ ಚಟ್ಟೋಪಾಧ್ಯಾಯರೆನಿಸಿದ್ದ ತುರೀಯಾನಂದರು. ಅವರು ೩–೧–೧೮೬೩ರಲ್ಲಿ ಜನಿಸಿದರು. ಮೂರುವರ್ಷದ ಮಗು ವಾಗಿದ್ದಾಗಲೇ ತುರೀಯಾನಂದರು ತಾಯಿಯಿಲ್ಲದ ತಬ್ಬಲಿಯಾಗಿಬಿಟ್ಟರು. ಹುಚ್ಚುನರಿಯ ಬಾಯಿಂದ ತನ್ನ ಆ ಮಗುವನ್ನು ಬಿಡಿಸಿಕೊಳ್ಳಲು ಹೋಗಿ, ತಾನೇ ಅದರ ಕಡಿತಕ್ಕೆ ಗುರಿಯಾಗಿ ಪ್ರಸನ್ನಮಯಿ ಪ್ರಾಣತೆತ್ತಳು. ಬುದ್ಧಿ ತಿಳಿದು ಸುಖದುಃಖಗಳು ಅನುಭವಕ್ಕೆ ಬರುತ್ತಿರುವಾಗಲೇ ತಂದೆ ಚಂದ್ರನಾಥರು ಸಾವಿನ ಹಾಸುಗೆಯ ಮೇಲೆ ಮಲಗಿಬಿಟ್ಟರು. ಆಗ ಬಾಲಕ ತುರೀಯಾನಂದರು ಸಂಕಟವನ್ನು ತಾಳಿಕೊಳ್ಳಲಾರದೆ ಬಿಕ್ಕಿಬಿಕ್ಕಿ ಅಳುತ್ತಿದ್ದರು. ಅವರ ಹಿರಿಯಕ್ಕನಿಗೆ ತನ್ನ ಕಿರಿಯ ಸೋದರನ ಸಂಕಟವನ್ನು ಕಣ್ಣಿಂದ ನೋಡಲಾಗಲಿಲ್ಲ. ಮರಣಶಯ್ಯೆಯಲ್ಲಿದ್ದ ತಂದೆಯನ್ನು ಕುರಿತು ತಾನೂ ಕಣ್ಣೀರು ಸುರಿಸುತ್ತಲೇ, "ಅಪ್ಪಾ, ಹರಿನಾಥನಿಗೆ ಏನಾದರೂ ಸಮಾಧಾನದ ಮಾತು ಹೇಳಪ್ಪಾ" ಎಂದು ಕೇಳಿಕೊಂಡಳು. ಚಂದ್ರನಾಥರಿಗೆ ವ್ಯಕ್ತಿಗಳ ಭವಿಷ್ಯವನ್ನು ಕುರಿತು ಹೇಳುವ ಅಪೂರ್ವಶಕ್ತಿಯೊಂದು ಕೈವಶವಾಗಿತ್ತು. ಆಗ ಅವರು, "ಹರಿನಾಥನ ವಿಚಾರದಲ್ಲಿ ಹೇಳುವುದೇನಿದೆಯಮ್ಮಾ, ಮುಂದಿನ ದಿನಗಳಲ್ಲಿ ಇಡೀ ಜಗತ್ತೇ ಅವನದಾಗುತ್ತದೆ, ಅವನು ಇಡೀ ಜಗತ್ತಿಗೆ ಸೇರಿದವನಾಗು ತ್ತಾನೆ" ಎಂದು ಹೇಳಿದರು. ಅದು ತಂದೆಯ ಆಶೀರ್ವಾದವಾಣಿಯೂ, ಸತ್ಯವಾಗಿ ಪರಿಣಮಿಸಿದ ಭವಿಷ್ಯವಾಣಿಯೂ ಆಯಿತು.

**ಸಂಯಮಪೂರ್ಣಜೀವನ:** ತುರೀಯಾನಂದರು ತಮ್ಮ ಬಾಲ್ಯದಿಂದಲೇ ತಮ್ಮ ಪೂರ್ವಸಂಸ್ಕಾರ ಬಲದಿಂದ ಸಂಯಮ ಪೂರ್ಣಜೀವನವನ್ನು ನಡೆಸುತ್ತಿದ್ದರು. ಬ್ರಹ್ಮೋಪದೇಶವಾದ ದಿನದಿಂದಲೂ ಸಂಧ್ಯಾವಂದನೆ, ಗಾಯತ್ರಿಜಪಗಳನ್ನು ತಪ್ಪದೆ ಮಾಡುತ್ತಿದ್ದರು. ದಿನಕ್ಕೆ ಮೂರು ಬಾರಿ ಸ್ನಾನ ಮಾಡುತ್ತಿದ್ದರು. ತಮ್ಮ ಅಡಿಗೆ ತಾವೇ ಮಾಡಿಕೊಳ್ಳುತ್ತಿದ್ದರು. ನೆಲದ ಮೇಲೆ ಮಲಗುತ್ತಿದ್ದರು. ನಿತ್ಯವೂ ಗೀತಾಪಾರಾಯಣ ಮಾಡುತ್ತಿದ್ದರು. 'ರಾಮಗೀತೆ' ಅವರಿಗೆ ಪ್ರಿಯವಾದ ಗ್ರಂಥಗಳಲ್ಲೊಂದಾಗಿತ್ತು. 'ವಿವೇಕಚೂಡಾಮಣಿ' ಮುಂತಾದ ಶಂಕರಾಚಾರ್ಯರ ಕೃತಿಗಳೂ ಅವರಿಗೆ ಪಂಚಪ್ರಾಣವಾಗಿದ್ದವು. ಅಧ್ಯಾತ್ಮಸಾಧನೆಗೆ ದೇಹಾರೋಗ್ಯವೂ ಚೆನ್ನಾಗಿರಬೇಕೆಂಬ ಉದ್ದೇಶದಿಂದ ಅಂಗಸಾಧನೆಗೆಂದು ಗರಡಿಮನೆಗೆ ಹೋಗುತ್ತಿದ್ದರು. ಪರಮಾರ್ಥ ಪಥ ದಲ್ಲಿ ತನಗೊಬ್ಬ ಸದ್ಗುರುವು ಬೇಕೆಂದು ಅವರು ಹಂಬಲಿಸುತ್ತಿದ್ದರು.

ಹದಿನಾಲ್ಕು ವರ್ಷದ ಬಾಲಕರಾಗಿದ್ದಾಗ ತುರೀಯಾನಂದರು ಕೊಲ್ಕತ್ತೆಯ ಬಾಗ್‌ಬಜಾರ್‌ನ ದೀನಾನಾಥಬಸು ಎಂಬ ಭಕ್ತರ ಮನೆಯಲ್ಲಿ ಪರಮಹಂಸರನ್ನು ಮೊದಲಬಾರಿಗೆ ನೋಡಿದರು. ಆಗ ಪರಮಹಂಸರು ತುರೀಯಾನಂದರ ಕಣ್ಣಿಗೆ ಭಾಗವತಮಹಾಪುರಾಣದಲ್ಲಿ ಬರುವ ಶುಕಮಹರ್ಷಿಗಳಂತೆ ಕಂಡರು. "ನಾನು ವಿವಾಹಬಂಧನಕ್ಕೆ ಒಳಗಾಗುವವನಲ್ಲ, ಕಣ್ಣೆದುರಿಗಿರುವ ಈ ಸದ್ಗುರುವನ್ನು ಮೊರೆಹೊಕ್ಕು ನನ್ನ ಬಾಳನ್ನು ಬೆಳಗಿಸಿಕೊಳ್ಳುತ್ತೇನೆ" ಎಂದು ಆ ಮುಹೂರ್ತದಲ್ಲಿಯೇ ನಿರ್ಧರಿಸಿಕೊಂಡುಬಿಟ್ಟರು. ಪರಮಹಂಸರಾದರೋ ಇಂತಹ ವೈರಾಗ್ಯಶಿರೋಮಣಿಗಳಾದ ಯುವಕರನ್ನೇ ಬಯಸುತ್ತಿದ್ದರು.

ಅವರು ನಿತ್ಯವೂ ಕಾಳಿಕಾಮಾತೆಯ ದೇವಾಲಯವನ್ನೇರಿ ಕೊಲ್ಕತಾ ಮಹಾನಗರದ ಬೀದಿಗಳನ್ನೇ ನೋಡುತ್ತ, "ಬನ್ನಿ ಮಕ್ಕಳೇ ಬನ್ನಿ, ನೀವು ಎಲ್ಲಿದ್ದರೂ ಬನ್ನಿ, ನಾನು ನಿಮಗಾಗಿ ಹಂಬಲಿಸುತ್ತಿದ್ದೇನೆ" ಎಂದು ಕೂಗಿಕರೆಯುತ್ತಿದ್ದರು. ಅಂತಹ ಕರುಳಿನ ಕರೆಗೆ ಓಗೊಟ್ಟು ತುರೀಯಾನಂದರು ದಕ್ಷಿಣೇಶ್ವರಕ್ಕೆ ಹೋಗಿ ಪರಮಹಂಸರ ಶಿಷ್ಯರಾಗಿಬಿಟ್ಟರು. ಅವರು ಶಾಲೆಯಲ್ಲಿ ವ್ಯಾಸಂಗಮಾಡುತ್ತ, ಅಂದಿನ ಎಂಟ್ರೆನ್ಸ್ ಪರೀಕ್ಷೆಯನ್ನು ಪಾಸುಮಾಡಿಕೊಂಡರು. ಲೌಕಿಕವಿದ್ಯೆಯಲ್ಲಿ ಮನಸ್ಸು ಮುಂದುವರಿಯಲಿಲ್ಲ. ಆಗಾಗ ದಕ್ಷಿಣೇಶ್ವರಕ್ಕೆ ಹೋಗಿ, ಪರಮಹಂಸರ ಪದತಲದಲ್ಲಿ ಕುಳಿತು, ತಮ್ಮ ಸಂದೇಹಗಳನ್ನೆಲ್ಲ ಪರಿಹರಿಸಿಕೊಳ್ಳುತ್ತಿದ್ದರು.

**ಮನೋಜ್ಞವಾದ ಪ್ರಶ್ನೋತ್ತರಗಳು:** ಕಾಮಮೋಹಗಳಿಂದ ಮುಕ್ತರಾಗುವುದು ಹೇಗೆ ಎಂಬ ಪ್ರಶ್ನೆ ತುರೀಯಾನಂದರನ್ನು ಪ್ರಬಲವಾಗಿ ಕಾಡುತ್ತಿತ್ತು. ಮುಕ್ತರಾಗುವುದೇನೂ ಬೇಡ, ಆ ಕಾಮಮೋಹಗಳನ್ನೇ ಪರಮಾತ್ಮನ ಕಡೆಗೆ ತಿರುಗಿಸಿದರಾಯಿತು ಎಂಬುದು ಪರಮಹಂಸರು ನೀಡಿದ ಸಮಾಧಾನವಾಗಿತ್ತು. ನಾರಿ ಎಂಬಾಕೆ ಮೋಕ್ಷಕ್ಕೆ ಅಡ್ಡಿಯುಂಟುಮಾಡುತ್ತಾಳೆ ಎಂಬ ಮಾತಿನಲ್ಲಿ ಏನಾದರೂ ನಿಜವಿದೆಯೆ ಎಂಬುದು ಮತ್ತೊಂದು ಪ್ರಶ್ನೆಯಾಗಿತ್ತು. "ಮಾತೆಯರೆಂದರೆ ಸುಮ್ಮನಾಗಲಿಲ್ಲ, ಅವರು ಜಗನ್ಮಾತೆಯರು. ನಿನ್ನ ತಾಯಿಗೆ ನಮಸ್ಕಾರ ಮಾಡುವಂತೆ ಅವರಿಗೆಲ್ಲ ಅಂತರಂಗದಲ್ಲಿಯೇ ನಮಸ್ಕರಿಸಬೇಕು. ಅವರನ್ನು ಧಿಕ್ಕರಿಸಿದಷ್ಟೂ ಅವರ ಬಲೆಗೆ ಬೀಳುವ ಸಾಧ್ಯತೆಗಳು ಹೆಚ್ಚಾಗುತ್ತವೆಯಪ್ಪಾ" ಎಂದು ಪರಮಹಂಸರು ತಿಳಿಯಹೇಳಿದರು. "ನಿಮ್ಮ ಸನ್ನಿಧಿಗೆ ಬಂದಾಗ ಮನಸ್ಸಿನಲ್ಲಿ ಉಲ್ಲಾಸವಿರುತ್ತದೆ. ಇಲ್ಲಿಂದ ಹೋದ ಬಳಿಕ ಮತ್ತೆ ಉಲ್ಲಾಸವೆಲ್ಲ ಬತ್ತಿಹೋಗುತ್ತದೆ, ಅದಕ್ಕೇನು ಕಾರಣ" ಎಂಬುದು ಕುತೂಹಲಕಾರಿ ಪ್ರಶ್ನೆಯಾಗಿತ್ತು. "ಉಲ್ಲಾಸದಿಂದಿರುವುದೇ ಒಂದು ಸಾಧನೆ, ಪರಮಾತ್ಮನ ಸೇವಕನಾದವನು ಎಲ್ಲಿದ್ದರೂ ಉಲ್ಲಾಸದಿಂದಿರುವುದನ್ನು ಕಲಿಯಬೇಕು" ಎಂದು ಶ್ರೀರಾಮಕೃಷ್ಣರು ಮಾರ್ಗದರ್ಶನ ಮಾಡಿದರು. "ಮಹಾರಾಜ್, ನೀವು ಸತ್ಸಂಗಕ್ಕೆ ಬರುವ ಮುನ್ನ ಹೇಳಬೇಕಾದ ದೃಷ್ಟಾಂತಗಳನ್ನೂ ಉಪಕಥೆಗಳನ್ನೂ ಜೋಡಿಸಿಕೊಂಡು ಬರುತ್ತೀರಾ" ಎಂಬುದಂತೂ ಸ್ವಾರಸ್ಯದ ಪ್ರಶ್ನೆಯಾಗಿತ್ತು. "ಇಲ್ಲಪ್ಪಾ, ನಾನು ಮಾತನಾಡಲು ತೊಡಗಿದರೆ ಕಾಳಿಕಾಮಾತೆಯೇ ನನ್ನ ನಾಲಗೆಯ ಮೇಲೆ ಕುಳಿತು, ನನಗೆ ಬೇಕುಬೇಕಾದ್ದನ್ನೆಲ್ಲ ಸರಬರಾಜು ಮಾಡುತ್ತಾಳೆ" ಎಂದು ಸದ್ಗುರುನಾಥರು ಉತ್ತರಿಸಿದರು.

**ಅಮೇರಿಕದಲ್ಲಿ ಶಾಂತಿ ಆಶ್ರಮ:** ತುರೀಯಾನಂದರಿಗೆ ಸುಮಾರು ಆರು ವರ್ಷಗಳಷ್ಟು ಕಾಲ ಪರಮಹಂಸರ ಸಾನ್ನಿಧ್ಯ ಲಭಿಸಿತ್ತು. ಪರಮಹಂಸರು ಅನಾರೋಗ್ಯ ಪೀಡಿತರಾದಾಗ ತಮ್ಮ ಕೈಲಾದ ಮಟ್ಟಿಗೆ ಸದ್ಗುರುಸೇವೆಯನ್ನು ಮಾಡಿದರು. ಆ ಸದ್ಗುರುವು ಮುಕ್ತರಾದ ಬಳಿಕ ೧೮೮೭ರಲ್ಲಿ ವಿವೇಕಾನಂದರ ನೇತೃತ್ವದಲ್ಲಿ ಸಂನ್ಯಾಸವನ್ನು ಶಾಸ್ತ್ರೋಕ್ತವಾಗಿ ಸ್ವೀಕರಿಸಿ, ಅವರಿಂದಲೇ 'ತುರೀಯಾನಂದರು' ಎಂಬ ತಮ್ಮ ಆಶ್ರಮನಾಮವನ್ನೂ ಪಡೆದುಕೊಂಡರು. ವಿವೇಕಾನಂದರೂ ತುರೀಯಾನಂದರೂ ೧೮೬೩ರಲ್ಲೇ ಹುಟ್ಟಿದವರಾಗಿದ್ದು ಸಮಾನವಯಸ್ಕರೂ ಸಮಾನಮನಸ್ಕರೂ ಆಗಿದ್ದರು. ಸಂನ್ಯಾಸಿಗಳಾದ ಬಳಿಕ ತುರೀಯಾನಂದರು ವಿಪುಲವಾಗಿ ದೇಶಾಟನೆ ಮಾಡಿದರು. ವಿವೇಕಾನಂದರೊಡನೆಯೂ ಕೆಲವು ತೀರ್ಥಗಳನ್ನು ಸಂದರ್ಶಿಸಿದರು.

ತುರೀಯಾನಂದರಿಗೆ ಪಾಶ್ಚಾತ್ಯದೇಶಗಳಿಗೆ ಹೋಗುವುದು ಇಷ್ಟವಿರಲಿಲ್ಲ. ಆದರೆ ವಿವೇಕಾನಂದರ ಪ್ರೀತಿಪೂರ್ವಕ ಒತ್ತಾಯದ ಮೇರೆಗೆ ೧೮೯೯ರಲ್ಲಿ ಅವರೊಡನೆಯೇ ಅಮೇರಿಕೆಗೆ ಹೋದರು. ಸ್ವಲ್ಪಕಾಲ ನ್ಯೂಯಾರ್ಕಿನ ವೇದಾಂತ ಸೊಸೈಟಿಯಲ್ಲಿದ್ದುಕೊಂಡು, ಅಲ್ಲಿನ ಜನರಿಗೆ ಆದರ್ಶವಾಗುವಂತಹ ಋಷಿಜೀವನ ನಡೆಸಿದರು. ೧೯೦೦ರ ಸುಮಾರಿನಲ್ಲಿ ಅಮೇರಿಕದ ಮಿನ್ನಿಸಿಬೂಕ್ ಎಂಬ ಪುಣ್ಯಶೀಲೆಯು ಸೈಂಟ್ ಆ್ಯಂಟೊನಿ ಎಂಬ ಕಣಿವೆಯಲ್ಲಿ ಆಧ್ಯಾತ್ಮಕೇಂದ್ರದ ಸ್ಥಾಪನೆಗಾಗಿ ೧೬೦ ಎಕರೆ ಭೂಮಿಯನ್ನು ದಾನವಾಗಿ ಕೊಟ್ಟಳು. ಆಗ ವಿವೇಕಾನಂದರು ತುರೀಯಾನಂದರನ್ನು ಕುರಿತು, "ಗೆಳೆಯಾ, ನೀನು ಅಲ್ಲಿ ಆಶ್ರಮವೊಂದನ್ನು ಸ್ಥಾಪಿಸಬೇಕು, ವೇದಾಂತದ ಬಾವುಟವನ್ನು ಅಲ್ಲಿ ಹಾರಿಸಬೇಕು" ಎಂದು ಕೇಳಿಕೊಂಡರು. ತಮಗೆ ಮಿತ್ರನೂ ನಾಯಕನೂ ಆದ ಅವರ ಮಾತನ್ನು ತಳ್ಳಿಹಾಕಲಾರದೆ ತುರೀಯಾನಂದರು ಆ ಹೊಣೆಗಾರಿಕೆಯನ್ನು ವಹಿಸಿಕೊಂಡರು.

ಕೇವಲ ಹನ್ನೆರಡು ಮಂದಿ ಭಕ್ತರೊಡನೆ, ಯಾವ ಸೌಕರ್ಯಗಳೂ ಇಲ್ಲದ, ಹಳೆಯ ಮನೆಯೊಂದು ಮಾತ್ರವೇ ಇದ್ದ ಆ ಕಣಿವೆಗೆ ತುರೀಯಾನಂದರು ಪ್ರಯಾಣ ಬೆಳೆಸಿದರು. ನೀರಿಲ್ಲ, ವಿದ್ಯುಚ್ಛಕ್ತಿಯಿಲ್ಲ, ಸುತ್ತಲೂ ಕಾಡು, ವಿಷಜಂತುಗಳ ಕಾಟ ಬೇರೆ. ಆದರೂ ಎದೆಗುಂದದೆ ಡೇರೆಗಳಲ್ಲಿದ್ದುಕೊಂಡು ಕಾರ್ಯೋನ್ಮುಖರಾದರು. ವಿಷದ ಜೀರುಂಡೆಯೊಂದು ಕಚ್ಚಿ, ತೋಳೆಲ್ಲ ಬಾತುಕೊಂಡು, ಪಡಬಾರದ ಪಾಡು ಪಡಬೇಕಾಯಿತು. ಕೊನೆಗೂ 'ಶಾಂತಿ ಆಶ್ರಮ' ಎಂಬ ಹೆಸರಿನಲ್ಲಿ ಆಧ್ಯಾತ್ಮಿಕ ಕೇಂದ್ರವೊಂದನ್ನು ಕಟ್ಟಿಬೆಳೆಸಿದರು. ಎರಡು ವರ್ಷಗಳ ಕಾಲ ಶಿಸ್ತು ಸಂಯಮಗಳಿಂದ ಕೂಡಿದ ಆಶ್ರಮ ಜೀವನವನ್ನು ನಡೆಸುತ್ತ ಭಕ್ತರನ್ನೆಲ್ಲ ಪಳಗಿಸಿದರು. ದೇಹಾರೋಗ್ಯ ಕುಸಿಯ ತೊಡಗಿದಾಗ, ಅಲ್ಲಿ ನಿಲ್ಲಲಾರದೆ ೧೯೦೨ ರಲ್ಲಿ ಭಾರತಕ್ಕೆ ಹಿಂತಿರುಗಿ ಬಂದರು.